# ವಿನಾಯಕನೂ, ಯಕ್ಷಗಾನೀಕರಣವೂ..!

■ ಚಿತ್ರ–ಲೇಖನ: ಜಿ.ಎಸ್. ಭಟ್ಟ



ಯಕ್ಷಗಾನರಂಗ ಪ್ರದರ್ಶನದಲ್ಲಿ ರಂಗಶುದ್ಧಿ ಮತ್ತು ದೇವತಾ ಪ್ರಾರ್ಥನೆಗಳಿದ್ದೇ ಇರುತ್ತವೆ. ಈಗಿನ ದಿನಮಾನದಲ್ಲಿ ರಂಗಶುದ್ಧಿಗೆ ಅಷ್ಟೊಂದು ಮಹತ್ವವಿಲ್ಲದಿದ್ದರೂ ಗಣಪತಿಸ್ತುತಿಗೆ ಹೆಚ್ಚು ಮಹತ್ವವಿದೆ. ಯಕ್ಷಗಾನದಲ್ಲಿ ಪೂಜೆಗೊಳ್ಳುವ ಗಣಪತಿಯ ಯಕ್ಷಗಾನೀಕರಣ ವಿಧಾನ ನಿಜಕ್ಕೂ ರೋಚಕವಾದುದು. ಯಕ್ಷಗಾನದ ಗಣಪತಿ ಅಪ್ಪಟ ಯಕ್ಷಗಾನದ್ದೇ!

ಉತ್ತರ ಕನ್ನಡ ಜಿಲ್ಲೆಯ ಕುಮಟೆ ತಾಲೂಕಿನ ಗೋಕರ್ಣದ ಮತ್ತು ಹೊನ್ನಾವರ ತಾಲೂಕಿನ ಇಡಗುಂಜಿಯ ಮೂರ್ತಿಗಳು ಪ್ರಾಚೀನ ಗಣೇಶಶಿಲ್ಪದ ಲಕ್ಷಣಗಳಿಗೆ ಇಂದಿಗೂ ಮಾದರಿಗಳಾಗಿವೆ. ಹೊನ್ನಾವರ ತಾಲೂಕಿನ ಹೈಗುಂದದಲ್ಲಿ ದೊರಕಿದ ಯಕ್ಷಶಿಲ್ಪದ ನಂತರದ ರೂಪವೇ ಈ ಗಣೇಶ ಶಿಲ್ಪಕ್ಕಿದೆಯೆಂದು ಪ್ರಾಜ್ಞರು ಗುರುತಿಸಿದ್ದಾರೆ. ಯಕ್ಷಶಿಲ್ಪದಂತೆ ಕುಬ್ಜ ರೂಪ, ಯಜ್ಞೋಪವೀತದಂತೆ ಧರಿಸಿದ ಘಂಟೆಯ ಸರ ಇವು ಯಕ್ಷಶಿಲ್ಪದ ನಂತರದ ಪರಿವರ್ತನೆಯೇ ಗಣೇಶಶಿಲ್ಪ ಎಂಬುದನ್ನೂ ದೃಢೀಕರಿಸುತ್ತವೆ.

ಮೊದಲು ಹೊರಗೆ ಕಾಣುವ ಎರಡು ದಂತಗಳು ಕಾಲಕ್ರಮದಲ್ಲಿ ಒಂದೇ ದಂತವಾದುದು. ಎರಡು ಕೈಗಳಿಂದ ಕೈಗಳ ಸಂಖ್ಯೆ ಹೆಚ್ಚುತ್ತಾ ಹೋದುದು, ವಿವಿಧ ಬಗೆಯ ಶಿರೋಭೂಷಣಗಳು, ಆಯುಧಗಳು, ಭಂಗಿಗಳು ಎಲ್ಲವೂ ಶಿಲ್ಪಗಳಲ್ಲಿ ಶಾಶ್ವತಗೊಂಡು ಜನಪ್ರಿಯವಾಗಿವೆ. ಶಿಲೆ, ಕಾಷ್ಠ, ಮಣ್ಣು, ವಿವಿಧ ಬಗೆಯ ಲೋಹಗಳು, ವರ್ಣ, ರೇಖೆ ಮುಂತಾದವುಗಳೆಲ್ಲ ಗಣಪತಿಯ ಬಹುರೂಪಗಳನ್ನು ಹಿಡಿದಿಡಲು ನಿರಂತರವಾಗಿ ಹಾತೊರೆದಿವೆ.

ಎಲ್ಲಿಸ್ ಗೆಟ್ಟಿಯವರ 'ಎಲಿಫಂಟ್ ಫೇಸ್ಡ್ ಗಾಡ್' ಗ್ರಂಥ ಇಂಗ್ಲಿಷಿನಲ್ಲಿ ಪ್ರಕಟವಾದ ಮೇಲಂತೂ ಗಣಪತಿಯ ಕಲ್ಪನೆ  ವ್ಯಾಪಕವಾಯಿತು. ಆದರೆ ಗಣಪನ ಈ ಯಾವ ಪರಿಕಲ್ಪನೆಗಳೂ ಯಕ್ಷಗಾನದ ಗಣಪನಿಗೆ ಸಂಬಂಧವೇ ಇಲ್ಲವೆಂಬುದು ಯಕ್ಷಗಾನೀಯತೆಗೆ ಸಂದ ಬಹು ದೊಡ್ಡ ಗೌರವ.

ಯಕ್ಷಗಾನ ಮೇಳಗಳು ಬಹುಮಟ್ಟಿಗೆ ಸ್ಥಳೀಯ ದೇವರುಗಳ ಹೆಸರಿನಲ್ಲಿದ್ದರೂ ಅಂಥ ದೇವರನ್ನು ಭಾಗವತರುಗಳ ಸಮಯಸ್ಫೂರ್ತಿ ಮತ್ತು ಸಮಯ ಹೊಂದಾಣಿಕೆಯನ್ನು ಅವಲಂಬಿಸಿ ಮಾತ್ರ ಸ್ತುತಿ ಮಾಡಲಾಗುತ್ತದೆ. ಆದರೆ ಬಣ್ಣದ ಮನೆಯಲ್ಲಿಯೂ ರಂಗಸ್ಥಳದಲ್ಲಿಯೂ ಗಣಪತಿ ಪೂಜೆಗೆ ಆದ್ಯತೆ ಮತ್ತು ಮಹತ್ವ. ತಾಳಮದ್ದಲೆಯಲ್ಲಿಯೂ ಮೊದಲಿಗೆ ಅಮೂರ್ತ ಗಣಪತಿಯ ಸ್ತುತಿ ಇದ್ದೇ ಇರುತ್ತದೆ.

(8ನೇ ಪುಟ ನೋಡಿ)